RegdNo B G 155 Sri (108) 8 —6—1965

ಸತ್ಯವಾದಿ

48th Year
Satyavadi
DAILY
MYSORE 4

ಸಂಸ್ಥಾಪಕರು — ಅವಧಾನೇಶ್ವರ್ ಎಂ ಎ ಶುಬ್ಬರಾಯುರು ಸಂಪಾದಕರು — ಧರ್ಮಪ್ರ ಚಾರವಿಂತ ಎಂ.ಎಸ್ ಕೃಷ್ಣರಾವ್ 2ಪೈ

ಹಿಂದೂ ನಡತೆ

★

ಅಲಹಾಬಾದಿನ ಏ ಜಿ ಆಫೀಸಿನಲ್ಲಿ ಸೂಪರಿಂಟೆಂಡೆಂಟರಾಗಿರುವ ಶ್ರೀ ವಿಶ್ವನಾಥನ್‌ರು 64 ರ ಅಕ್ಟೋಬರ್‌ನಲ್ಲಿ ಜಿಲ್ಲಾ ಮುಖ್ಯಸ್ಥಳವಾದ ಬರೇಲಿಯಲ್ಲಿ ಇನ್ಸ್‌ಪೆಕ್ಷನ್ ಪ್ರವಾಸ ನಡೆಸುತ್ತಿದ್ದಾಗ ಒಂದು ಮಾಮೂಲಿ ಭೋಜನಾಲಯದಲ್ಲಿ ಊಟ ಮಾಡಿ ಮೂತ್ರವೈಲಿಗಾಗಿ ಅಲ್ಲಿ ತಾವು ಇಳಿದುಕೊಂಡಿದ್ದ ಸ್ಥಳಕ್ಕೆ ಹೊರಟರು. ಸುಮಾರು 2 ಮೈಲಿ ದೂರ ಹೋದಾಗ 300 ರೂಗಳಿದ್ದ ತಮ್ಮ ಹಣದ ಚೀಲವಿಲ್ಲದ್ದನ್ನು ಕಂಡುಹೊಂಡರು : ತಾವು ದಾರಿಯಲ್ಲಿ ಕಳೆದುಕೊಂಡಿಲ್ಲವೆಂದು ದೃಢಪಟ್ಟುಕೊಂಡು, ಭೋಜನಶಾಲೆಯಲ್ಲಿ ಬಿಟ್ಟಿ ಬೇಕೆಂದು ನಂಬಿ ಬೆಗೆಬೇಗ ಒಡು ರಿಕ್ಷಾದಲ್ಲಿ ಅಲ್ಲಿಗೆ ಹೋದರು ; ಅಲ್ಲಿ ಎಲ್ಲ ಸ್ಥಳಗಳಲ್ಲಿಯೂ ತಡಕಾಡಿದರೂ ಪ್ರಯೋಜನವಾಗಲಿಲ್ಲ: ನಂತರ ಮ್ಯಾನೇಜರನ್ನು ವಿಚಾರಿಸಿದರು: ಮ್ಯಾನೇಜರು ಈತನಿಗೆ ಕೆಲವು ಪ್ರಶ್ನೆಗಳನ್ನು ಹಾಕಿ, ತೃಪ್ತಿಕರ ಉತ್ತರ ಪಡೆದು ಹಣದ ಚೀಲವನ್ನು ಅವನಿಗೆ ಕೊಟ್ಟರು. ಅದು ಭೋಜನ ಕೊಠಡಿಯಲ್ಲಿ ಬಿದ್ದಿತ್ತು. ಸೇವಕನಿಗೆ ಸಿಕ್ಕಿತೆಂದು ಹೇಳಿದರು. ವಿಶ್ವನಾಥನ್‌ರು ಆ ಸೇವಕನ ಪ್ರಾಮಾಣಿಕತೆಗಾಗಿ ಪಾರಿತೋಷಕವಾಗಿ ಕೊಡಲು 10 ರೂಗಳನ್ನು ತೆಗೆದರು: ಆದರೆ ಸೇವಕನು ತೆಗೆದುಕೊಳ್ಳಲೊಪ್ಪದೆ, ತಾನು ಕೇವಲ ತನ್ನ ಕರ್ತವ್ಯ ಮಾಡಿದೆನೆಂದು ಹೇಳಿದನು.

ನಂತರ ಶ್ರೀ ವಿಶ್ವನಾಥನ್‌ರು ಒಂದು ದೇವಾಲಯದಲ್ಲಿ ಹನುಮಂತನ ಪೂಜೆ ನೆರವೇರಿಸಿದರು.

❀

ನಾಳೆಯ ಪಂಚಾಂಗ

ದೈವಜ್ಞ ಶಿಖಾಮಣಿ
ಅಷ್ಟಾವಧಾನಮಹಾವಿದ್ವಾನ್ ಧರ್ಮಾಧಿಕಾರಿ
ರಾಜಕಾರ್ಯಾಸಕ್ತ, ಜ್ಯೋತಿರ್ವಿದ್ವನ್ಮಣಿ
ಸಂಪಸಕ್ಕೃಷ್ಣಜೋಯಿ ಸಾವರಿಂದ

9 ಬುಧವಾರ ವಿಕಾರಿನಾಮ ಚೈತ್ರ

ಉಪಾಧ್ಯಾಯರ ಕ್ಷೇತ್ರ

ಶ್ರೀನಗರ— ಇಲ್ಲಿ ನಡೆದ ರಾಜ್ಯಗಳ ವಿದ್ಯಾ ಸಚಿವರ ಸಮ್ಮೇಳನದಲ್ಲಿ ಉಪಾಧ್ಯಾಯರ ಕ್ಷೇತ್ರವನ್ನು ವಜಾ ಮಾಡಬೇಕೆಂದು ನಿರ್ಧರಿಸಲಾಯಿತು

❀

ಉಲ್ಲಂಘನೆ

ಕಲ್ಕತ್ತಾ— ಕಳೆದ ಎರಡು ವಾರಗಳಲ್ಲಿ ಪಾಕಿಸ್ತಾನವು ಪಶ್ಚಿಮ ಬಂಗಾಳದ ಗಡಿ ಉಲ್ಲಂಘಿಸಿದೆ — ನದಿಯುದ್ದಗಳ ಕಂಚಕ್ಕಿ ಹತ್ತಿರ ಧ್ವಾಂಧಲೆ ಮಾಡಿದೆ — ದಿನಾಜಪುರ ಗಡಿಯಲ್ಲಿ ಭಾರತ ಗ್ರಾಮಗಳ ಮೇಲೆ ಧಾಳಿ ನಡೆಸಿ ಲೂಟಿಮಾಡಿಕೊಂಡು ಹೋಗಿದಾರೆ

ಬಾಂಬುಗಳ ವರ್ಷ

ಕಲ್ಕತ್ತಾ— ಉತ್ತರ ಕಲ್ಕತ್ತಾದಲ್ಲಿ ಮೊನ್ನೆ ರಾತ್ರಿ ಪೋಲೀಸರು ನಡೆಸಿದ ಮನೆ ಶೋಧನೆಯಲ್ಲಿ 37 ಭಾರೀ ಸ್ಫೋಟಕ ಬಾಂಬುಗಳನ್ನು ಪತ್ತೆಮಾಡಿಕೊಂಡು 4 ಜನರನ್ನು ಬಂಧಿಸಿದರು

❀

ಬಸ್ ಅಪಘಾತ

ಕಲ್ಕತ್ತಾ— ಒಂದು ಸರಕಾರಿ ಬಸ್ ರಾಜಭವನದ ಹತ್ತಿರ ಅಪಘಾತಕ್ಕೊಳಗಾಗಿ 6 ಜನ ಸತ್ತು, 29 ಮಂದಿ ಗಾಯಗೊಂಡರು.

❀

ಬೆಲೆ ನಿಯಂತ್ರಣೆ

ನವದೆಹಲಿ— ಭಾರತ ಸರಕಾರವು ಭತ್ತ, ಜೋಳ, ಮುಸುಕಿನಜೋಳ, ಮತ್ತು ಜವ್ವಾರಿಗಳಿಗೆ ಕನಿಷ್ಠ ಬೆಲೆ ನಿಯಂತ್ರಿಸಿದೆ

❀

ಸಂಘರ್ಷಣೆ

ಟೋಕಿಯೊ— ಅಲ್ಜೀರಿಯಾ ಸಂಯೋಜನೆಯಲ್ಲಿ ಇಷ್ಟಾಭಾಗವಹಿಸುವ ವಿಷಯವಾಗಿ ಭಾರತ-ಚೀನಾಗಳಿಗೆ ಸಂಘರ್ಷಣೆ ಆಗಬಹುದೆಂದು ಹೇಳಲಾಗಿದೆ

ರೂ. 60 ಲಕ್ಷ ಮೌಲ್ಯದ ಕಳ್ಳ ನಾಗಾಣಿಕೆಗಳು

★

ಕಳ್ಳ ಹಣ

ಬೊಂಬಾಯಿ— ಮೇಲಕಶ್ಮೀರದ ನಿವಾಸವೊಂದರಲ್ಲಿ 6 ಲಕ್ಷ ರೂಗಳ ಭಾರತದ ಹಣವನ್ನೂ ಕೆಲವು ಕಾಗದ ಪತ್ರಗಳನ್ನೂ ವಶಪಡಿಸಿಕೊಳ್ಳಲಾಗಿದೆ.

★

ಭಾಷಾ ಸಮಸ್ಯೆ

ಮದರಾಸು— ಭಾಷಾ ವಿಷಯದಲ್ಲಿ ಕಾಂಗ್ರೆಸ್ಸು ಕಾರ್ಯಕಾರಿ ಸಮಿತಿಯ ನಿರ್ಣಯವು ಭಾಷಾ ವಿಷಮಸ್ಯೆಯನ್ನು ಪರಿಹರಿಸುವಂತಿಲ್ಲವೆಂದು ಡಿಎಂಕೆ ನಾಯಕ ಅಣ್ಣಾದೊರೆ ಹೇಳಿದರು

★

ಅನ್ನ ಕೂಲವಿಲ್ಲ

ಮಧುರೈ— ಮದರಾಸು ರಾಜ್ಯದ ಸಭಾ ವಿರೋಧ ನಾಯಕ ಶ್ರೀ ನೇಡೊ ಭೋಜನವನ್ನು, ಭಾಷಾ ಸಂಬಂಧದ ನಿರ್ಧಾರವು ಹಿಂದಿಯೇತರ ಭಾಗಗಳಿಗೆ ಅನುಕೂಲವಾಗಿಲ್ಲವೆಂದಿಂಪರು

❀

ಸಂಜೆ ತರಗತಿಗಳು

ಮೈಸೂರು— ಮಹಾರಾಜಾ ಕಾಲೇಜಿನಲ್ಲಿ 65–66 ರಲ್ಲಿ ಸಂಜೆ ತರಗತಿಗಳನ್ನು ನಡೆಸಲು ಯೋಜಿಸಲಾಗಿದೆ

❀

ವಾರ್ಷಿಕೋತ್ಸವ

ಮೈಸೂರು— ಕೆ ಆರ್ ಸರ್ಕಲ್‌ನಲ್ಲಿರುವ ಬೊಂಬಾಯಿ ಆನಂದ ಭವನ ಸ್ಟೋರ್ಸಿನ 10 ನೇ ವಾರ್ಷಿಕೋತ್ಸವವು ತಾ|| 10 ಗುರುವಾರ ಸಂಜೆ ನೆರವೇರುವುದು.

ಬೊಂಬಾಯಿ— 60 ಲಕ್ಷ ರೂಗಳ ಮೌಲ್ಯದ ಭಂಗಾರ, ವಜ್ರ ಮತ್ತು ಗಡಿಯಾರಗಳನ್ನು ಬೊಂಬಾಯಿ-ಅಹಮದಾಬಾದು ರಸ್ತೆಯಲ್ಲಿ ಒಂದು ಕಾರಿನಿಂದ ಸೆಂಟ್ರಲ್ ಎಕ್ಸ್‌ಸೈಸಿನವರು ವಶಪಡಿಸಿಕೊಂಡು ಕಾರಿನಲ್ಲಿದ್ದ ನಾಲ್ಕು ಮಂದಿಯನ್ನು ಪ್ರಶ್ನೆಮಾಡಲು ನಿಲ್ಲಿಸಿಕೊಂಡರು

★

ನೆಹರೂ ಸ್ಮಾರಕ

ಬೆಂಗಳೂರು— ನೆಹರೂರ ಸೂಕ್ತ ಸ್ಮಾರಕ ಸ್ಥಾಪನೆಗಾಗಿ ರೂ 1 ಕೋಟಿ ಹಣ ಶೇಖರಿಸಲು ಸಂಬಂಧ ಸಮಿತಿಯು ನಿರ್ಧರಿಸಿದೆ.

❀

ಪಾಕಿಸ್ತಾನದ ಧ್ವಾಂಧಲೆ

ನವದೆಹಲಿ— ಜಮ್ಮು ಕಾಶ್ಮೀರದಲ್ಲಿ ತಮ್ಮ ಕಪಟನೆವಿಂತಾವನ್ನು ಉಲ್ಲಂಘಿಸಿ ಪಾಕಿಸ್ತಾನ ಸೈನಿಕರು ಭಾರತದ ತಿತ್ವಾಲ್, ಉರಿ, ಮೆಂಡಾರ್, ನೌಷೆರಾ ಮತ್ತು ಅಕ್ನೂರಿನ ಭಾಗದಲ್ಲಿ ತಾ|| 4 ಮತ್ತು 5 ರಲ್ಲಿ ಗುಂಡುಹಾರಿಸಿದರು. ಕಾರ್ಗಿಲು ಭಾಗದಲ್ಲಿ ಅತಿಕ್ರಮಿಸಿ ಬಂದ ಪಾಕಿಸ್ತಾನಿ ಸೈನಿಕರನ್ನು ಭಾರತ ಭೇಟೆ ಹೊಡೆದೋಡಿಸಿತು — ಪಾಕಿಸ್ತಾನದ ಕಡೆ ಹೆಚ್ಚು ಸಾವುನೋವಾಗಿದೆ — ಇಬ್ಬರು ಪಾರ್ ಸಿಪಾಯಿಗಳು ಬಂಧಿಸಲ್ಪಟ್ಟರು

❀

ಶತ್ರುಗಳ ಭಯವಿಲ್ಲ

ಶ್ರೀನಗರ— ಕಾಶ್ಮೀರದ ಜನತೆ ಒಗ್ಗಟ್ಟಾಗಿರುವರೆಂದೂ, ಪಾಕಿಸ್ತಾನದ ಅಥವಾ ಚೀನಾವನ್ನು ಯಶಸ್ವಿಯಾಗಿ ಎದುರಿಸಬಲ್ಲರೆಂದೂ ಭಾರತ ವಿದ್ಯಾ ಮಂತ್ರಿ ಚಾಗಲ್ಲಾ ಹೇಳಿದರು

ಶಾಸ್ತ್ರಧರ್ಮ ಪ್ರಚಾರ ಸಭಾ

Sastra Dharma Prachara Sabha,

(ಮುಂದುವರಿದುದು)

ರಾಜನಾಗಲೀ, ರಾಜಸಭೆಯಾಗಲೀ ಧರ್ಮಕ್ಕೆ ಅಂದರೆ ಶಾಸ್ತ್ರದಲ್ಲಿ ಬೋಧಿಸುವ ಧರ್ಮಕ್ಕೆ ವಿರೋಧವಾಗಿ ವರ್ತಿಸಬಾರದು : ಧರ್ಮ ರೀತಿಯಾ ರಾಜ್ಯಭಾರ ಮಾಡಿದಲ್ಲಿ ಮಾತ್ರ ಪ್ರಜೆಗಳು ಸುಖತಶಾಂತಿಗಳಿಂದ ಜೀವಿಸಬಲ್ಲರು ; ಅದರೆ ನಮ್ಮ ದುರಾದೃಷ್ಟದಿಂದ ನಮ್ಮ ಹುಬ್ಬುಂಡರು ವಿಶಾಶ್ಚಾತ್ಯರ ಅನುಕರಣೆ ಮಾಡಿ, ನಮ್ಮ ಸನಾತನವನ್ನು ಸುಧಾರಣೆ ಮಾಡುತ್ತೇವೆಂದು ಹೇಳುತ್ತಾ ಧರ್ಮಕ್ಕೆ ವಿರೋಧವಾದ ಶಾಸನಗಳನ್ನು ಮಾಡಿದ್ದಾರೆ ; ಇದರಿಂದ ಪ್ರತಿಯೊಬ್ಬರಿಗೂ ಶಾಸ್ತ್ರದಲ್ಲಿ ಶ್ರದ್ಧೆ ಕಪ್ಪಿಹೋ ಹಿಂದೂಧರ್ಮವೇ ನಾಶವಾಗುವ ಪರಿಸ್ಥಿತಿ ಒದಗಿದೆ : ಸುಧಾರಣೆಯನ್ನು ಬಯಸುವವರು ತಾವೇ ಪ್ರತ್ಯೇಕವಾದ ಪಂಗಡವಾಗಿ ತಮಗೆ ತೋರಿದಂತೆ ಮಾಡಿಕೊಳ್ಳಬಹುದು, ಅದಕ್ಕೆ ನಮ್ಮದೇನೂ ಅಡ್ಡಿಯಿಲ್ಲ. ಅದರೆ ಶಾಸ್ತ್ರದಂತೆ ನಡೆಯಬೇಕೆಂದಿರುವ ಬಹುಸಂಖ್ಯಾಕರಿಗೆ ಈ ರೀತಿ ನಡೆಯಿಸಿಕೊಡದೆಂದು ಶಾಸನಮಾಡುವುದು ಪ್ರಜಾಪ್ರಭುತ್ವದ ಲಕ್ಷಣವಲ್ಲ. ಆದುದರಿಂದ ಪ್ರತಿಯೊಬ್ಬರೂ ಶಾಸ್ತ್ರಗಳಂತೆ ನಡೆಯಬೇಕು. ಹಾಗೆ ನಡೆಯಬೇಡೆಂದಿರುವವರಿಗೆ ಯಾವ ರೀತಿಯೂ ತೊಂದರೆ ಉಂಟು ಮಾಡಬಾರದು. ಈ ವಿಷಯವನ್ನು ಪ್ರತಿಯೊಬ್ಬರೂ ಗಮನಿಸಿ:

ಇದುವರೆಗೆ ಶಾಸ್ತ್ರಧರ್ಮ ಪ್ರಚಾರ ಸಭೆಯು ಬೋಧಿಸುವ ಕೆಲವು ವಿಚಾರಗಳ ಬಗ್ಗೆ ಹೇಳಿದ್ದೆನು. ಇನ್ನು ಅದರ ಶಾಖೆಗಳು ಮತ್ತು ಸದಸ್ಯರ ಬಗ್ಗೆ ಕೆಲವು ವಿಚಾರಂಗಳನ್ನು ಹೇಳಬಯಸುತ್ತೇನೆ. ಶಾಸ್ತ್ರಧರ್ಮ ಪ್ರಚಾರ ಸಭೆಯು ಒಂದು ರಾಜಕೀಯ ಸಂಸ್ಥೆಯಲ್ಲ, ರಾಜಕೀಯಕ್ಕೂ ನಮಗೂ ಯಾವ ಸಂಬಂಧವಿಲ್ಲ ಅದರೆ ರಾಜಕೀಯ ಮುಂದಾಳುಗಳು ನಮ್ಮ ಧರ್ಮಕ್ಕೆ ತೊಂದರೆ ಉಂಟುಮಾಡಕೂಡದು ಎಂದು ಮಾತ್ರ ಬಯಸುತ್ತೇವೆ. [ಸಶೇಷ

— ಗೋರಕ್ಷಣೆ ಪತ್ರಿಕೆಗೆ ಬೆಂಬಲಿಗರಾಗಿರಿ —

ವುಡ್‌ಲ್ಯಾಂಡ್ಸ್ 2 ನೇ ವಾರದಲ್ಲಿ

★

ಪೇಗ್ನಾಕಾಂನ ಶುಂಬಿಳುಳ್ಳ.ಕ.ವ ಚಿತ್ರವಂದಿರಂದಲ್ಲಿ ಪ್ರದರ್ಶಿತವಾಗುತ್ತಿದೆ

ಸುಂದರ ದೃಶ್ಯಗಳು, ಸಮಧುರ ಸಂಗೀತ, ಆಕರ್ಷಣೀಯ ನೃತ್ಯಗಳು,

ಹಾಸ್ಯವಿನೋದಗಳಿಂದ ತೂಡಿದ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ

★

ಜಾನ್‌ವರ್ JANWAR

ಪಾತ್ರ- ಶಮ್ಮಿ ಕಪೂರ್, ರಾಜಶ್ರೀ, ರಾಜೇಂದ್ರನಾಥ್, ಪೃಥ್ವಿರಾಜ್

ಅಪೆರ— ಅಪೂರ್ವ 2 ನೇ ವಾರ

ಅಶ್ವಮೇಧ ಕನ್ನಡಚಿತ್ರ — ಪ್ರತಿದಿನ 3 ಆಟಗಳು

ನನ್ನ ಕರ್ತವ್ಯ

ತಾರಾಗಣ— ಕಲ್ಯಾಣಕುಮಾರ್, ನಾಗೇಂದ್ರರಾವ್, ನರಸಿಂಹರಾಜು

ಚಂದ್ರಶೇಖರ್, ಸಂಧ್ಯಾ, ಜಯ ಲಲಿತ

SHAKTI

SUDHA

A Superb Tonic

ಗೋರಕ್ಷಣೆ ಪತ್ರಿಕೆಯ ಕಾರ್ಯಾಲಯ ಹೆಚ್ಚಿನಾಗಿ ನಡೆಯುತ್ತಿದೆ



ವಿಳಾಸ— ಗೋರಕ್ಷಣ ಅಫೀಸು ಚಾಮರಾಜಪುರಂ, ಮೈಸೂರು 4